# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂ: ಬಿ31/ಅಇಂ(ಐಟಿ&ಎಂ.ಐ.ಎಸ್)/ಕಅ ಇಂ(ಐಟಿ-1)/ಕಾಪ್ರಇಂ-2/1379/2020-21

ನಿಗಮ ಕಛೇರಿ
ಕಾವೇರಿ ಭವನ
ಬೆಂಗಳೂರು
ದಿನಾಂಕ: 07-11-2020

## ಸುತ್ತೋಲೆ

ವಿಷಯ : ಕವಿಪ್ರನಿನಿ ನಿಗಮ ಕಾರ್ಯಾಲಯದಲ್ಲಿ ಇ- ಕಚೇರಿ ತಂತ್ರಾಂಶವನ್ನು ಅನುಷ್ಠಾನಗೊಳಿಸುವ ಬಗ್ಗೆ.

ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ನಿರ್ದೇಶನದಂತೆ, ಕವಿಪ್ರನಿನಿ, ನಿಗಮ ಕಚೇರಿ ಯಲ್ಲಿ ಇ-ಕಚೇರಿ ತಂತ್ರಾಂಶವನ್ನು ತುರ್ತಾಗಿ ಅನುಷ್ಠಾನಗೊಳಿಸಿ 01.12.2020 ರಿಂದ ಸದರಿ ತಂತ್ರಾಂಶದ ಮೂಲಕ ಕಡತಗಳ ಸಂಪೂರ್ಣ ನಿರ್ವಹಣೆಯನ್ನು ಕೈಗೊಳ್ಳಬೇಕಾಗಿರುತ್ತದೆ.

ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ ಕಡತವನ್ನು ನಿರ್ವಹಿಸುವ ಅಧಿಕಾರಿ/ನೌಕರರಿಗೆ ka.gov.in ಪ್ರತ್ಯೇಕವಾದ ಇ-ಮೇಲ್ ಹಾಗೂ ಪಾಸ್ವರ್ಡ್ ಅನ್ನು ರಚಿಸಿ SMS ಮೂಲಕ ಸದರಿ ಅಧಿಕಾರಿ/ನೌಕರರಿಗೆ ಇ-ಆಡಳಿತ ಕೇಂದ್ರ, ಕರ್ನಾಟಕ ಸರ್ಕಾರ ದಿಂದ ಈಗಾಗಲೇ ಕಳುಹಿಸಲಾಗಿದೆ. ಇ-ಆಡಳಿತ ಕೇಂದ್ರದಿಂದ ಒದಗಿಸಲಾಗಿರುವ ಇ-ಮೇಲ್ ಹಾಗೂ ಪಾಸ್ವರ್ಡ್‌ಗಳು ಅಧಿಕಾರಿ/ನೌಕರರ ಬಳಿ ಲಭ್ಯವಿಲ್ಲದಿದ್ದಲ್ಲಿ, ಮಾಹಿತಿ ತಂತ್ರಜ್ಞಾನ ಶಾಖೆಯನ್ನು ಸಂಪರ್ಕಿಸಿ ಇ-ಮೇಲ್ ಹಾಗೂ ಪಾಸ್ವರ್ಡ್‌ಗಳನ್ನು ಪಡೆದುಕೊಳ್ಳಬಹುದಾಗಿದೆ.

ದಿನಾಂಕ 04.11.2020/05.11.2020 ರಂದು ಇ-ಕಚೇರಿ ತಂತ್ರಾಂಶದ ಬಳಕೆಯ ತರಬೇತಿಯನ್ನು ಪಡೆದ ಅಧಿಕಾರಿ/ನೌಕರರು ತಮ್ಮ ಕಚೇರಿ /ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಅಧಿಕಾರಿ/ನೌಕರರಿಗೆ ತರಬೇತಿಯನ್ನು ನೀಡಬೇಕಾಗಿರುತ್ತದೆ.

ಸದರಿ ತಂತ್ರಾಂಶವನ್ನು ದಿನಾಂಕ 01.12.2020 ರಿಂದ ನಿಗಮ ಕಾರ್ಯಾಲಯದಲ್ಲಿ ಪೂರ್ಣ ಪ್ರಮಾಣದಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕಾಗಿರುವುದರಿಂದ, ಪ್ರಸ್ತುತ ಪ್ರಾಯೋಗಿಕ ತಂತ್ರಾಂಶವನ್ನು (https://eofficedemo.karnataka.gov.in) ದಿನಾಂಕ 01.12.2020 ರವರೆಗೆ ಬಳಸಿಕೊಂಡು, ತಂತ್ರಾಂಶದ ಕೌಶಲ್ಯವನ್ನು ಹೊಂದಬೇಕಾಗಿರುತ್ತದೆ.

ನಿರ್ದೇಶಕರು (ಆ ಮತ್ತು ಮಾ.ಸಂ)
ನಿಗಮ ಕಾರ್ಯಾಲಯ, ಕವಿಪ್ರನಿನಿ

ಪ್ರತಿಗಳು:

1. ಎಲ್ಲಾ ಮುಖ್ಯ ಇಂಜಿನಿಯರುಗಳು(ವಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ. ಕಾವೇರಿ ಭವನ, ಬೆಂಗಳೂರು
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/(ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ವಿ),( ಐಟಿ ಮತ್ತು ಎಂಐಎಸ್)-ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/(ಸಿವಿಲ್), ಕವಿಪ್ರನಿನಿ, ಕಾವೇರಿ ಭವನ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಪ್ರಸರಣಾ)/ ನಿರ್ದೇಶಕರು(ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.